ವಿಜಯವಾಣಿ
ಕನ್ನಡಿಗರ ಧ್ವನಿ

# ಒಟ್ಟಾರೆ ಫಲಿತಾಂಶ ಏರಿಕೆ: ಬೆಂಗಳೂರಿನಲ್ಲಿ ಇಳಿಕೆ

- 14ನೇ ಸ್ಥಾನಕ್ಕೆ ಕುಸಿದ ಬೆಂಗಳೂರು ಗ್ರಾಮಾಂತರ
- 10ನೇ ಸ್ಥಾನಕ್ಕೆ ತೃಪ್ತಿಪಟ್ಟ ಬೆಂಗಳೂರು ಉತ್ತರ
- ಯಥಾಸ್ಥಿತಿ ಕಾಯ್ದುಕೊಂಡ ಬೆಂಗಳೂರು ದಕ್ಷಿಣ
- ಸಂಭ್ರಮದಲ್ಲಿ ವಿದ್ಯಾರ್ಥಿನಿಯರು...

**ಬೆಂಗಳೂರು:** ಈ ಸಾಲಿನ ಪಿಯು ಫಲಿತಾಂಶ ಒಟ್ಟಾರೆ ಕಳೆದ ಬಾರಿಗಿಂತ ಶೇ. ಎಂಟರಷ್ಟು ಹೆಚ್ಚಾಗಿದ್ದರೂ ಬೆಂಗಳೂರಿನ ಫಲಿತಾಂಶದಲ್ಲಿ ಭಾರೀ ಇಳಿಮುಖವಾಗಿರುವುದು ಆತಂಕ ಮೂಡಿಸಿದೆ.

ಬೆಂಗಳೂರು ದಕ್ಷಿಣ, ಉತ್ತರ ಹಾಗೂ ಗ್ರಾಮಾಂತರ ಜಿಲ್ಲೆಗಳ ಈ ಸಾಲಿನ ಸರಾಸರಿ ಫಲಿತಾಂಶ ಶೇ.61.33. ಆದರೆ 2011ನೇ ಸಾಲಿನಲ್ಲಿ ಇದು ಶೇ. 66.43 ಆಗಿತ್ತು. ಕಳೆದ ಸಾಲಿನ ಫಲಿತಾಂಶಕ್ಕೆ ಹೋಲಿಸಿದರೆ ಈ ಬಾರಿ ಶೇ. 5.10 ಕುಸಿತ ಕಂಡಿದೆ.

**ಬೆಂಗಳೂರು ಗ್ರಾಮಾಂತರ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಳೆದ ಸಾಲಿನಲ್ಲಿ ಶೇ. 67.45 ಫಲಿತಾಂಶ ಪಡೆದು 6ನೇ ಸ್ಥಾನದಲ್ಲಿತ್ತು. ಈ ಬಾರಿ ಶೇ. 60.16 ಫಲಿತಾಂಶ ಪಡೆದು 14ನೇ ಸ್ಥಾನಕ್ಕೆ ಕುಸಿದಿದೆ. 2011ನೇ ಸಾಲಿನಲ್ಲಿ ಶೇ.66.04 ಫಲಿತಾಂಶ ಪಡೆದಿದ್ದ ಬೆಂಗಳೂರು ಉತ್ತರ ಜಿಲ್ಲೆ ಎಂಟನೇ ಸ್ಥಾನ ಪಡೆದಿತ್ತು. ಆದರೆ, ಈ ಸಾಲಿನಲ್ಲಿ 61.79 ಅಂಕಪಡೆದು 10ನೇ ಸ್ಥಾನಕ್ಕೆ ಕುಸಿದಿದೆ. ಬೆಂಗಳೂರು ದಕ್ಷಿಣ ಜಿಲ್ಲೆ ಹಿಂದಿನ ಬಾರಿ ಗಳಿಸಿದ್ದ 9ನೇ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರೂ ಫಲಿತಾಂಶದಲ್ಲಿ ಶೇ. 65.81ರಿಂದ 62.04ಕ್ಕೆ ಹಿನ್ನಡೆ ಕಂಡಿದೆ.

**ಎಸ್ಸೆಸ್ಸೆಲ್ಸಿಯಲ್ಲೂ ಇದೇ ವ್ಯಥೆ:** ಬೆಂಗಳೂರು ಗ್ರಾಮಾಂತರ ಜಿಲ್ಲೆ 2011ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ರಾಜ್ಯದಲ್ಲೇ ಮೊದಲ ಸ್ಥಾನ ಪಡೆದಿತ್ತು. 2010ನೇ ಸಾಲಿನಲ್ಲಿ 2ನೇ ಸ್ಥಾನದಲ್ಲಿತ್ತು. ಆದರೆ ಈ ಸಾಲಿನಲ್ಲಿ 18ನೇ ಸ್ಥಾನ ಪಡೆದು ಅಚ್ಚರಿ ಮೂಡಿಸಿತ್ತು. ಈ ಕುರಿತು ಎಸ್ಸೆಸ್ಸೆಲ್ಸಿ ಫಲಿತಾಂಶದಂದು ತಮ್ಮ ಅಸಮಾಧಾನ ಹೊರ ಹಾಕಿದ್ದ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಇಲಾಖೆ ಅಧಿಕಾರಿಗಳಿಂದ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು.

**ವೈಯುಕ್ತಿಕವಾಗಿ ಉತ್ತಮ:** ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಪಟ್ಟಿಯಲ್ಲಿ ಮೊದಲಿಗರಾಗುವ ಅವಕಾಶ ತಪ್ಪಿಸಿಕೊಂಡಿದ್ದ ಬೆಂಗಳೂರಿನ ಬಾಲಿಯರು ದ್ವಿತೀಯ ಪಿಯುನಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಲ್ಲಿ ಅಗ್ರ ಸ್ಥಾನಿಗಳಾಗುವ ಮೂಲಕ ಪ್ರಾಬಲ್ಯ ಮೆರೆದಿದ್ದಾರೆ.







ಉತ್ತಮ ಅಂಕಗಳಿಸಲು ಟ್ಯೂಷನ್ ತೆಗೆದುಕೊಂಡಿದ್ದು ಕಾರಣವಾಯಿತು. ಅಲ್ಲದೆ ಅಮ್ಮ ಶೈಲಾ ಮತ್ತು ಅಪ್ಪ ಮಂಜುನಾಥ್ ಸಾಕಷ್ಟು ಪ್ರೋತ್ಸಾಹ ನೀಡಿದರು.

ದೀಪಾ, ರಾಜ್ಯಕ್ಕೆ ಪ್ರಥಮ
(ವಿಜ್ಞಾನ ವಿಭಾಗ)

ವಿಜ್ಞಾನ ವಿಭಾಗದಲ್ಲಿ ಶೇ. 98.57 ಅಂಕ ಗಳಿಸಿ ಬೆಂಗಳೂರಿನ ಎಂಇಎಸ್ ಕಾಲೇಜಿನ ಎಂ.ದೀಪಾ ರಾಜ್ಯಕ್ಕೇ ಮೊದಲಿಗರಾಗಿದ್ದಾರೆ. ಮೂಲತಃ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹೆಗ್ಡೆಯವರಾದ ಮಂಜುನಾಥ್ ಹಾಗೂ ಶೈಲಾ ದಂಪತಿಗಳ ಪುತ್ರಿ ಈಕೆ. ತಂದೆ ಕೆನರಾ ಬ್ಯಾಂಕ್ ಹಾಗೂ ತಾಯಿ ಬಿಎಸ್‌ಎನ್‌ಎಲ್ ಉದ್ಯೋಗಿಗಳು. ಮಲ್ಲೇಶ್ವರಂ ನಿವಾಸಿಯಾಗಿರುವ ಈಕೆ ತನ್ನ ಸಾಧನೆಯಿಂದ ಖುಷಿಯಾಗಿದ್ದಾರೆ.

'ರಾಜ್ಯಕ್ಕೇ ಮೊದಲಿಗಳಾಗಿರುವುದು ಸಂತಸ ನೀಡುತ್ತಿದೆ. ಪಿಯುಸಿಗಿಂತ ಸಿಇಟಿಗೆ ಹೆಚ್ಚಿನ ಗಮನಹರಿಸಿದೆ. ಆದರೆ ಪಿಯು ಪರೀಕ್ಷೆ ಹತ್ತಿರವಾಗುತ್ತಿದ್ದಂತೆ ಪ್ರತಿದಿನ 3ರಿಂದ 4ಗಂಟೆ ಓದುತ್ತಿದ್ದೆ. ಯಾವುದೇ ಟೈಮ್ ಟೇಬಲ್ ಮಾಡಿಕೊಂಡಿರಲಿಲ್ಲ. ಮುಂದೆ ಇಂಜಿನೀಯರಿಂಗ್‌ನಲ್ಲಿ ಎಲೆಕ್ಟ್ರಾನಿಕ್ಸ್ ತೆಗೆದುಕೊಳ್ಳುವ ಬಯಕೆಯಿದೆ' ಎಂದು ಸಂತಸ ಹಂಚಿಕೊಳ್ಳುತ್ತಾರೆ.

ವಾಣಿಜ್ಯ ವಿಭಾಗದಲ್ಲಿ ವಿ.ವಿ. ಪುರಂ ಜೈನ್ ಕಾಲೇಜಿನ ವಿದ್ಯಾರ್ಥಿನಿ ಬಿ.ರವೀನಾ ಜೈನ್ ಶೇ. 98.57 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ರಾಜ್ಯದಲ್ಲೇ ಹೆಚ್ಚಿನ ಅಂಕ ಗಳಿಸಿರುವುದು ಅಚ್ಚರಿ ಹಾಗೂ ಸಂತಸ ತಂದಿದೆ. ಶೇ.95ಕ್ಕಿಂತ ಹೆಚ್ಚಿನ ಅಂಕಗಳಿಸುತ್ತೇನೆ ಎಂದು ತಿಳಿದುಕೊಂಡಿದ್ದೆ. ಶಿಕ್ಷಕರು ಹಾಗೂ ಪೋಷಕರು ರ‍್ಯಾಂಕ್ ಪಡೆಯುತ್ತೀಯ ಎನ್ನುತ್ತಿದ್ದರು. ಅದರಂತೆ ರ‍್ಯಾಂಕ್ ಪಡೆದಿದ್ದೇನೆ, ಇದರಿಂದ ಖುಷಿಯಾಗಿದೆ ಎನ್ನುತ್ತಾರೆ.

ಈಕೆಯಷ್ಟೇ ಅಲ್ಲದೆ ಜೈನ್ ಕಾಲೇಜಿನ ಎಸ್.ಮೋನಿಶ ವಾಣಿಜ್ಯ ವಿಭಾಗದಲ್ಲಿ ಶೇ.98 ಅಂಕ ಗಳಿಸಿದ್ದಾರೆ. ಅಲ್ಲದೆ ಹರ್ಷ ಸಿ. ಗೋಪಾಲಿನಿ ಹಾಗೂ ಎಸ್. ಪಣಿಶ್ರೀ. ಇವರಿಬ್ಬರೂ ಶೇ. 97.83 ರಷ್ಟು ಅಂಕಗಳಿಸುವ ಮೂಲಕ ಕಾಲೇಜಿಗೆ ಜಂಟಿಯಾಗಿ ತೃತಿಯ ಸ್ಥಾನ ಪಡೆದಿದ್ದಾರೆ.